ಹೇಳಿದ ರೀತಿಯಲ್ಲಿ ನಡೆಯುತ್ತಿತ್ತೆಂಬುದನ್ನು ಒಪ್ಪಿಕೊಳ್ಳುತ್ತೇನೆ ಈಗ ಕೇವಲ 2-3 ದಿವಸಗಳ ಹಿಂದೆ ಪೆರಿಯಪಟ್ಟ ತಾಲ್ಲೂಕಿನ ನರುವಾಡಿ ಮತ್ತು ಬೆಟ್ಟದ ತುಂಗ ಎಂಬ ಗ್ರಾಮಗಳನ್ನು ಬೆಂಕಿ ಬಿದ್ದ ಕಾರಣ ಒಬ್ಬ ಹುಡುಗ ಆ ಬೆಂಕಿಯಲ್ಲಿ ಸಿಕ್ಕಿ ಸತ್ತಿದ್ದಾನೆ ಈ ಎರಡು ಗ್ರಾಮಗಳಲ್ಲಿ ಎನು ಒಂದು ಪಾಲಿಸಿಯನ್ನು ನಿರ್ಧಾರ ಮಾಡಿದ್ದಾರೋ ಅವಕ್ಕೆ ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಹರಿಜನರ ಕೇರಿಗಳಲ್ಲಿ ಎಲ್ಲೆಲ್ಲಿ ಬೆಂಕಿ ಬೀಳುತ್ತದೋ ಅವರೆಲ್ಲರಿಗೂ ಕೂಡ ಸೈಟುಗಳನ್ನು ಕೊಡುವುದರ ಜೊತೆಗೆ ಜನತಾ ಹೌಸಿಂಗ್ ಸ್ಕೀಂ ನಲ್ಲಿ ಎಷ್ಟು ಮನೆಗಳು ಸುಟ್ಟಿವೆಯೋ ಅಷ್ಟು ಮನೆಗಳನ್ನು ಕಟ್ಟುವುದಕ್ಕೆ ಹಣ ಸಹಾಯ ಮಾಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ನಿಲುವಾಡಿಯಲ್ಲಿ 25 ಮನೆಗಳು ಸುಟ್ಟವು ಅವರು 30 ಮನೆಗಳು ಬೇಕೆಂದು ಕೇಳಿದ್ದಕ್ಕೆ ಅಷ್ಟನ್ನು ಕಟ್ಟಿಸಿ ಕೊಡುವುದಕ್ಕೆ ನಾವು ಒಪ್ಪಿಕೊಂಡಿದ್ದೇವೆ. ಬೆಟ್ಟದ ತುಂಗದಲ್ಲಿ 35 ಮನೆಗಳು ಸುಟ್ಟವು ಅವರು 42 ಮನೆಗಳು ಬೇಕೆಂದುದಕ್ಕೆ ಜನತಾ ಹೌಸಿಂಗ್ ಯೋಜನೆ ಪ್ರಕಾರ ಧನಸಹಾಯ ಕೊಡುವುದಕ್ಕೆ ಸಿದ್ಧರಾಗಿದ್ದೇವೆ. ಆದುದರಿಂದ ನಾವು ಘನನರ್ಕಾರದ ಈ ಒಂದು ಧೋರಣೆಯನ್ನು ಮೆಚ್ಚುತ್ತೇವೆಂದು ತಿಳಿದುಕೊಂಡಿದ್ದೇನೆ.

ಬಂಗಾರುಪೇಟೆ ತಾಲ್ಲೂಕಿನಲ್ಲಿ ಪಿ.ಎಲ್.ಡಿ ಬ್ಯಾಂಕಿನಿಂದ ಬಾವಿ ತೋಡಿಸುವುದಕ್ಕೆ ಸಾಲ

೫೧೧ ಶ್ರೀ ಕೆ.ಎಂ.ದೊರೆಸ್ವಾಮಿನಾಯ್ಡು (ಬೇತಮಂಗಲ) .— ಸಹಕಾರ ಮಂತ್ರಿಗಳು ಈ ವಿಷಯಂಗಳನ್ನು ದಯೆಯಿಟ್ಟು ತಿಳಿಸುವರೆ:—

(ಅ) ಬಂಗಾರುಪೇಟೆ ತಾಲ್ಲೂಕಿನಲ್ಲಿ ಪಿ.ಎಲ್.ಡಿ. ಬ್ಯಾಂಕಿನಿಂದ ಬಾವಿಗಳನ್ನು ಮಾಡಿಸಲು ೧೯೬೫ರಿಂದ ಎಷ್ಟು ಜನ ರೈತರಿಗೆ ಸಾಲಗಳನ್ನು ಕೊಟ್ಟಿರುತ್ತಾರೆ;

(ಆ) ಕೊಟ್ಟಿರತಕ್ಕ ರೈತರ ಪೈಕಿ ಎಷ್ಟು ಜನ ರೈತರು ಬಾವಿಗಳನ್ನು ಪೂರ್ತಿ ಮಾಡಿರುತ್ತಾರೆ; ಎಷ್ಟು ಜನ ರೈತರು ಪೂರ್ತಿ ಮಾಡಿರುವುದಿಲ್ಲ;

(ಇ) ಇವರುಗಳ ಪೈಕಿ ಎಷ್ಟು ಜನ ರೈತರು ಬಾವಿಗಳಲ್ಲಿ ಬಂಡೆ ಬಿದ್ದು ಪೂರ್ತಿಮಾಡಲು ಸಾಧ್ಯವಿಲ್ಲದೆ ಅವುಗಳನ್ನು ತನಿಖೆ ಮಾಡಿಸಬೇಕೆಂದು ಮತ್ತು ಇವುಗಳನ್ನು ಪರೀಕ್ಷಿಸಿ ಲೋನು ಕೊಟ್ಟಿರುವುದನ್ನು ವಜಾ ಮಾಡಬೇಕೆಂದು ಅರ್ಜಿಗಳನ್ನು ಕೊಟ್ಟಿರುತ್ತಾರೆ;

(ಈ) ಎಷ್ಟು ಬಾವಿಗಳನ್ನು ಇದುವರೆಗೂ ತನಿಖೆ ಮಾಡಲಾಗಿದೆ;

(ಉ) ತನಿಖೆ ಮಾಡದೆ ಇದ್ದರೆ, ಇದಕ್ಕೆ ಕಾರಣಗಳೇನು;

(ಊ) ಈ ಬಗ್ಗೆ ರೈತರು ಅನೇಕ ಅರ್ಜಿಗಳನ್ನು ಕೊಟ್ಟಿದ್ದರೂ ಸಹಾ ತನಿಖೆ ನಡಸದೇ ಅವರ ಕಂತುಗಳ ಹಣಗಳನ್ನು ವಸೂಲು ಮಾಡಲು ಜಪ್ತಿ ವಗೈರೆ ನಡೆಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ.ಎಚ್.ರಂಗನಾಥ್ (ಸಹಕಾರ ಮಂತ್ರಿಗಳು)

(ಅ) ೧೮೬೩

(ಆ) ೯೭೩ ಬಾವಿಗಳು ಪೂರ್ತಿಯಾಗಿರುತ್ತವೆ. ೮೯೦ ಬಾವಿಗಳು ಪೂರ್ತಿಯಾಗಿಲ್ಲ.

(ಇ) ೬೦ ಜನ ರೈತರು.

(ಈ) ೫೪.

(ಉ) ಉಳಿದ ಅರ್ಜಿಗಳು ಸದ್ಯದಲ್ಲಿ ಬಂದಿವೆ.

(ಊ) ಬಾವಿಗಳು ಉಪಯೋಗವಿಲ್ಲವೆಂದು ಖಚಿತವಾಗುವವರೆವಿಗೂ ವಸೂಲಾತಿ ಕ್ರಮ ಬದ್ಧವಾಗಿರುತ್ತದೆ.

ಶ್ರೀ ಕೆ.ಎಂ.ದೊರೆಸ್ವಾಮಿನಾಯಡ್ಡಿ.— ಸ್ವಾಮಿ, ೧೮೬೩ ಬಾವಿಗಳ ಪೈಕಿ ೯೭೩ ಬಾವಿಗಳು ಪೂರ್ತಿಯಾಗಿರುತ್ತವೆ, ಇನ್ನು ೮೯೦ ಬಾವಿಗಳು ಪೂರ್ತಿಯಾಗಿಲ್ಲ ಎಂದು ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ, ಈಗ ೧೧ ವರ್ಷಗಳಾದರೂ ಕೂಡ ಈ ಬಾವಿಗಳು ಪೂರ್ಣವಾಗದೆ ಇರುವುದಕ್ಕೆ ಕಾರಣ ಏನು ?

† ಶ್ರೀ ಕೆ.ಹೆಚ್.ರಂಗನಾಥ್.— ಈ ೬೯೦ ಬಾವಿಗಳು ಪೈಕಿ ೧೯೭೩-೭೪ಕ್ಕೆ ಸಂಬಂಧಪಟ್ಟ ಹಾಗೆ ೧೧೪ರಿಂದ ೧೩ ರ ವರೆಗೆ ಬಾವಿಗಳು ಇವೆ, ಇನ್ನು ಕೆಲವು ಬಾವಿಗಳು ಎಂದರೆ ೧೯೬೭-೬೮ ಮತ್ತು ೧೯೬೯-೭೦ರಲ್ಲಿ ಆ ಎರಡು ವರ್ಷದಲ್ಲಿ ಒಂದು ಸ್ವಲ್ಪ ಜಾಸ್ತಿ ಇತ್ತು.

ಶ್ರೀ ಕೆ ಎಂ.ದೊರೆಸ್ವಾಮಿನಾಯ್ಡು —ಈಗ ೬೦ ಜನ ರೈತರು ತನಿಖೆ ನಡೆಸಿ ಲೋನು ವಜಾ ಮಾಡ ಬೇಕೆಂದು ಅರ್ಜಿ ಕೊಟ್ಟಿದ್ದರಲ್ಲಿ ೫೪ ಬಾವಿಗಳನ್ನು ಇನ್‌ಸ್ಪೆಕ್ಷನ್ ಮಾಡಿದ್ದೇವೆ ಎಂದು ತಿಳಿಸಿದ್ದೀರಿ, ಅವುಗಳ ಪೈಕಿ ಉಪಯೋಗಕ್ಕೆ ಎಷ್ಟು ಬಾವಿಗಳು ಬರುತ್ತವೆ ?

ಶ್ರೀ ಕೆ ಹೆಚ್.ರಂಗನಾಥ್ ಈಗ ೫೪ ಬಾವಿಗಳು ಪೈಕಿ ೫೨ಕ್ಕೆ ಬೆನಿಫಿಟ್ ಸಿಕಂವುದಿಲ್ಲ ಎಂದು ರಿಪೋರ್ಟ್ ಬಂದಿದೆ ಇನ್ನು ಉಳಿದ ಎರಡು ಬಾವಿಗಳ ಬಗ್ಗೆ ಡೆವಲಪ್‌ಮೆಂಟ್ ಕಮಿಷನರ್ ಮತ್ತು ಡೆಪ್ಯುಟಿ ಕಮಿಷನರ್ ಬಳಿ ಇದ್ದು ಅವರಿಗೆ ಒಂದು ಆಧ್ಯತೆ ಕೊಡಲಾಗಿದೆ.

ಶ್ರೀ ಸಿ ಬೈರೇಗೌಡ. — ಈಗ ೬೯೦ ಬಾವಿಗಳ ಪೈಕಿ ನಿಜವಾಗಿ ೨ ಬಾವಿಗಳು ಮಾತ್ರ ಫೈಲ್ಯೂರ್ ಆಗಿದೆ ಎಂದರೆ ಇನ್ನುಳಿದ ೬೮೮ ಬಾವಿಗಳ ಹಣ ದುರುಪಯೋಗವಾಗಿರುವುದಂ ಕಂಡು ಬರುತ್ತದೆ, ಅಲ್ಲದೇ ಬಾವಿಗಳು ಮುಗಿದ್ದಿಲ್ಲ ಎಂದರೆ, ಬಾವಿಗಳು ಮುಗಿಯದೇ ಇರುವುದಕ್ಕೆ ತಾವು ಅವರಿಗೆ ಹಣ ಕೊಡುವಾಗ ಎಷ್ಟೆಷ್ಟು ಇನ್‌ಸ್ಟಾಲ್‌ಮೆಂಟಿನಲ್ಲಿ ಕೊಟ್ಟಿದ್ದೀರಾ ತಿಳಿಸುತ್ತಿರಾ. ?

ಶ್ರೀ ಕೆ.ಹೆಚ್.ರಂಗನಾಥ್.— ಈ ೬೯೦ ಬಾವಿಗಳ ಪೈಕಿ ೭೨ ಬಾವಿಗಳು ಬೇಡ ಎಂದು ರೀ ಫಂಡ್ ಆಗಿದೆ ಇನ್ನು ೯೨ ಬಾವಿಗಳು ರೀ ಕಾಲ್ ಮಾಡಿದ್ದಾರೆ. ಇನ್ನು ಮಿಕ್ಕ ಬಾವಿಗಳು ವೇರಿಯಸ್ ಸ್ಟೇಜಸ್‌ನಲ್ಲಿ ಇವೆ. ಅಲ್ಲದೇ ಈ ಬಾವಿಗಳನ್ನು ತೆಗೆಯುವಾಗ ಮೊದಲು ೫೦ ಪರ್‌ಸೆಂಟ್ ಕೊಡುತ್ತೇವೆ. ನಂತರ ಆದು ಕೆಲಸ ನಡೆದರೆ ೪೦ ಪರ್‌ಸೆಂಟ್ ಕೊಡುತ್ತೇವೆ ನಂತರ ಬಾವಿ ಪೂರ್ತಿ ಆದಮೇಲೆ ಉಳಿದ ೧೦ ಪರ್‌ಸೆಂಟ್ ಕೊಡುತ್ತೇವೆ, ಅಲ್ಲದೇ ಕೆಲವು ನಿಧಾನವಾಗಿರುವುದಂ ಕಂಡುಬರುತ್ತದೆ.

ಶ್ರೀ ಟಿ.ಎಂ.ಮಂಜುನಾಥ್.— ಸ್ವಾಮಿ, (೧) ಉತ್ತರವಾಗಿ ೬೦ಜನ ರೈತರು ಬಾವಿ ವಿಫಲವಾಗಿದೆ ಎಂದು ಅರ್ಜಿಕೊಟ್ಟಿದ್ದಾರೆ ಎಂದು ಹೇಳುತ್ತೀರಿ, ಇವೊತ್ತು ಸರ್ಕಾರ ಯಾವ ಬಾವಿಯಲ್ಲಿ ನೀರು ಸಿಕ್ಕುವುದಿಲ್ಲ ಅದನ್ನು ಫೈಲೂರ್ ಎಂದು ಮಾಡುತ್ತಾರೆ. ಆಲ್ಲಿ ಏನಾಗುತ್ತದೆ ಎಂದರೆ ಅವರು ಬಾವಿ ತೋಡುವಾಗ ಮಣ್ಣು ಕುಸಿಯುವುದು ಇರುತ್ತದೆ ಆದುದರಿಂದ ಅಲ್ಲಿ ತೆಗೆಯಲಿಕ್ಕೆ ಹೋಗುವುದಿಲ್ಲ, ಈಗ ಸರ್ಕಾರ ಹಾಕಿ ಕೊಂಡಿರುವತಕ್ಕ ಕಾನೂನು ಪ್ರಕಾರ ಇದು ಒಂದು ಫೈಲ್ಯೂರ್ ಆದಂತೆ ಆಗುತ್ತದೆ, ಆದರಿಂದ ಇದರ ಬಗ್ಗೆ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಈ ತರಹ ಮಣ್ಣು ಕುಸಿಯುತಕ್ಕ ಕೆಡೆಗಳಲ್ಲಿ ಫೈಲ್ಯೂರು ಎಂದು ಪರಿಗಣಿಸದೇ ಒಳ್ಳೆಯ ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಕೆ.ಹೆಚ್.ರಂಗನಾಥ್. — ಈಗ ನೀರು ಬಾರದೇ ಹೋದರೆ ಮಾತ್ರ ಫೈಲ್ಯೂರ್ ಎಂದು ತೆಗೆದು ಕೊಳ್ಳುತ್ತೇವೆ. ಈಗ ಮಾನ್ಯಸದಸ್ಯರು ಹೇಳತಕ್ಕದ್ದು ಸರ್ಕಾರಿ ಆಜ್ಞೆಯಲ್ಲಿ ಇಲ್ಲ.

ಶ್ರೀ ಕೆ.ಎಂ.ದೊರೆಸ್ವಾಮಿನಾಯ್ಡು:—ಈಗ ತಮ್ಮ (ಊ) ಉತ್ತರದಲ್ಲಿ ಬಾವಿಗಳು ಉಪಯೋಗವಿಲ್ಲ ವೆಂದು ಖಚಿತವಾಗುವವರೆವಿಗೂ ವಸೂಲಾತಿ ಕ್ರಮಬದ್ಧವಾಗಿರುತ್ತದೆ ಎಂದು ತಿಳಿಸಿದ್ದಿರಿ, ಇವೊತ್ತು ೬೦ ಜನರು ಅಪ್ಲಿಕೇಷನ್ ಹಾಕಿಕೊಂಡಿದ್ದವರಲ್ಲಿ ಅವರ ಹತ್ತಿರ ಜಪ್ತಿ ಮಾಡುತ್ತಿದ್ದಾರೆ, ಇದನ್ನು ನಿಲ್ಲಿಸಿ ಜಾಗ್ರತೆ ಫೈಸಲ್ ಮಾಡಿ ನಂತರ ವಸೂಲಿ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಕೆ ಹೆಚ್.ರಂಗನಾಥ್.— ಈಗ ಇಬ್ಬರದು ಮಾತ್ರ ವಿಚಾರಣೆಯುಲ್ಲಿದೆ, ಇನ್ನು ೫೨ ಜನರು ಕಟ್ಟಲೇ ಬೇಕಾಗುತ್ತದೆ.

Accident at Arc Furnace of MISL

542. SRI ABDUL KHUDUS ANWAR (Bhadravathi)—. Will the Minister for Industries and Parliamentary Affairs be pleased to state:—

(a) the number of accidents that occurred in MISL during the year 1974-75;

(b) the number of casualities and the loss of production in each department;